ರಾಜ್ಯದಲ್ಲಿ ದೊಡ್ಡ ಹಿಡುವಳಿದಾರರಿಂದ ಸರ್ಕಾರಿ ಜಮೀನಿನ ಒತ್ತುವರಿ

ಶ್ರೀ. ಶ್ರೀ ಕೆ.ಎಚ್. ಪಾಟೀಲ್ (ಗದಗ್).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಈ ರಾಜ್ಯದಲ್ಲಿ ದೊಡ್ಡ ಹಿಡುವಳಿದಾರರಿಂದ ಸರ್ಕಾರದ ಜಮೀನನ್ನು ಒತ್ತುವರಿ ಮಾಡಿರುವ ಒಟ್ಟು ಎಕರೆ ಎಷ್ಟು ಮತ್ತು ಅದರ ವಿವರಗಳೇನು ಆ ಬಗ್ಗೆ ಸರ್ಕಾರದವರು ಇನ್ನೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

ದೊಡ್ಡ ಹಿಡುವಳಿದಾರರಿಂದ ಸರ್ಕಾರದ ಜಮೀನನ್ನು ಒತ್ತುವರಿ ಮಾಡಿರುವ ಯಾವುದೇ ಪ್ರಕರಣವು ಸರ್ಕಾರದ ಗಮನಕ್ಕೆ ಬಂದಿಲ್ಲವಾದ್ದರಿಂದ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಸರ್ಕಾರವು ಆದೇಶ ಸಂಖ್ಯೆ ಆರ್‌ಡಿ ೧೦೫ ಎಲ್‌ಜಿಪಿ ೭೭ ದಿನಾಂಕ ೧೯-೯-೧೯೭೭ ಮತ್ತು ಸಂಖ್ಯೆ ಆರ್‌ಡಿ ೨೭ ಎಲ್‌ಜಿಪಿ ೮೧ ದಿನಾಂಕ ೨೭-೩-೧೯೮೧ ರಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿದ ಸರ್ಕಾರಿ ಜಮೀನನ್ನು ಅರ್ಹರಾದ ಭೂಹೀನ, ಚಿಕ್ಕ ಮತ್ತು ಅತೀ ಸಣ್ಣ ರೈತರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಪರವಾಗಿ ಸಕ್ರಮೀಕರಣಗೊಳಿಸುವ ಸಲುವಾಗಿ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿರುತ್ತದೆ. ಅರ್ಹರಲ್ಲದ ಒತ್ತುವರಿ ಮತ್ತು ಅನಧಿಕೃತವಾಗಿ ಸಾಗುವಳಿ ಮಾಡಿದ ಎಲ್ಲ ಪ್ರಕರಣಗಳನ್ನು ಒಕ್ಕಲೆಬ್ಬಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ನಾನು ಲಿಖಿತ ಮೂಲಕ ಉತ್ತರಿಸುವ ಒಂಭತ್ತನೆಯ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

ಅಧ್ಯಕ್ಷರು... ಸದರಿ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ರೋಣ ತಾಲ್ಲೂಕು ಸಹಕಾರಿ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅವ್ಯವಹಾರದ ತನಿಖೆ ವರದಿ ಕಂಡಿತು

ಶ್ರೀ. ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

(ಅ) ರೋಣ ತಾಲ್ಲೂಕು ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಅವ್ಯವಹಾರದ ಬಗ್ಗೆ ತನಿಖೆ ನಡೆಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಅವ್ಯವಹಾರಗಳ ತನಿಖೆಯನ್ನು ಯಾವಾಗ ಮುಗಿಸಲಾಗುವುದು ?

(ಇ) ತನಿಖಾ ವರದಿಯನ್ನು ಶೀಘ್ರ ಸಲ್ಲಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ?

(ಈ) ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ಬಂದಿದೆ.

(ಆ) ೧೯೮೬ರ ಫೆಬ್ರುವರಿಯ ಅಧಿವೇಶನೊಳಗೆ ಮುಗಿಯುವ ಸಂಭವವಿದೆ.

(ಇ) ವಿಚಾರಣಾ ವರದಿಯನ್ನು ಜರೂರಾಗಿ ಸಲ್ಲಿಸಲು ವಿಚಾರಣಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಆದೇಶ ನೀಡಲಾಗಿದೆ.

(ಈ) ವಿಚಾರಣಾ ವರದಿ ಬಂದ ನಂತರ ಕಾನೂನಿನ ಪ್ರಕಾರ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.